
## ಕಥೆ

ಲವಲವಿಕೆ ಕಾಣುತ್ತಿಲ್ಲ... ನಡೆನಡೆದು ಸೋತು ಬಸವಳಿದವಳಂತೆ ಕಾಣುವ ಮೇಗಲೆ... ಅವಳೋ ಸುಮ್ಮನೇ ಎದುರಿನ ರಸ್ತೆಯನ್ನೊಮ್ಮೆ, ಟೇಬಲ್ ಮೇಲಿನ ನೀರಿನ ಗ್ಲಾಸನ್ನೊಮ್ಮೆ ನೋಡುತ್ತ, ಮಾತು ಜೋಡಿಸಿಕೊಳ್ಳಲು ಹೆಣಗುತ್ತಿದ್ದಾಳೆ. 'ನೀನು ಹೇಳಿದ್ದೂ ನಿಜ... ಪ್ರತಿದಿನ ಎಷ್ಟೆಲ್ಲ ರೈತರು ಆತ್ಮಹತ್ಯೆ ಮಾಡಿಕೊಳ್ತಾರೆ... ಸುದ್ದಿ ಅಂತ ಕಾಫಿ ಕುಡೀತಾ, ತಿಂಡಿ ತಿಂತಾ ಓದ್ತೀವಿ ಅಥವಾ ಟಿವೀಯಲ್ಲಿ ನೋಡ್ತೀವಿ... ಅವೆಲ್ಲ ಸುದ್ದಿಯ ಒಣ ತುಣಕುಗಳಾಗಿ ಕಣ್ಣಂಚಿನಿಂದ ಸರಿದು ಹೋಗುತ್ತೆ... ಎಲ್ಲೋ ಕೆಲವು ಬರಿಯ ಸುದ್ದಿಯಾಗಿ ಉಳಿಯೋದಿಲ್ಲ ವಿನೀ. ಪ್ರತಿ ವಿವರವೂ ಜೀವಪಡೆದುಕೊಳ್ತಾ, ಕಣ್ಣಿಂದ ಇಳಿದು ಸೀದಾ ಎದೆಯೊಳಗೆ ಮರವಾಗಿ ಊರಿಬಿಡುತ್ತೆ... ಯಾಕೆ ಸಿದ್ದಾರ್ಥನ ಆತ್ಮಹತ್ಯೆಯೇ ನನ್ನನ್ನು ಇಷ್ಟು ಕಾಡಬೇಕು... ಯಾವುದೇ ಕ್ಷಣದಲ್ಲಿಯೂ ಅವನ ಜಾಗದಲ್ಲಿ ನಾನೂ ಹೋಗಿ ನಿಂತುಬಿಡಬಹುದು ಅಂತ ಯಾಕೆ ಇಷ್ಟು ತೀವ್ರವಾಗಿ ಅನ್ನಿಸಬೇಕು... ಗೊತ್ತಿಲ್ಲ ಕಣೇ...' ಮೇಗಲೆ ನಿಟ್ಟುಸಿರು ಬಿಟ್ಟಳು.

ವಿನುತಾ ಮಾತಾಡದೇ ಅವಳ ಮುಂಗೈಯನ್ನು ಮೆತ್ತಗೆ ಒತ್ತಿದಳು. 'ನಿಜ್ವಾಗ್ಲೂ ಸಾರಿ ಕಣೇ... ನನಗೆ ಇತ್ತೀಚೆಗೆ ಚಿಕ್ಕಪುಟ್ಟದಕ್ಕೂ ಕಿರಿಕಿರಿ ಅನ್ನಿಸುತ್ತೆ... ಒಮ್ಮೆ ಈ ಎಲ್ಲಾ ಮೆನೋಪಾಸ್ ರಗಳೆಗಳು ಮುಗಿದ್ರೆ ಸಾಕಪ್ಪಾ ಅನ್ನಿಸಿಬಿಟ್ಟಿದೆ... ಬೆಳಗ್ಗೆ ಆ ಥರಾ ರೇಗಿದ್ದಕ್ಕೆ ನನ್ನ ಮೇಲೇ ನಂಗೆ ಬೇಜಾರಾಯ್ತು...'

'ನಂಗೆ ಸದ್ಯ ನಲ್ವತ್ತಾರಕ್ಕೇ ನಿಂತು ಹೋಯಿತು. ಆಮೇಲೆ ಒಂದು ನಾಕೈದು ವರ್ಷಕ್ಕೆ ಮೆನೋಪಾಸಿನ ಇತರೇ ರಗಳೆಗಳು ನಿಂತವು. ಸದ್ಯ, ಅದೊಂದು ವಿಚಾರದಲ್ಲಿ ನನ್ನ ದೇಹವೇ ನನ್ನ ಶತ್ರು ಅನ್ನೋ ಥರಾ ಆಗಲಿಲ್ಲ. ಈಗ ನೆನಪಿಸಿಕೊಂಡರೆ ಆಗೆಲ್ಲ ಕಿರಿಕಿರಿ ಅನುಭವಿಸಿದ್ದು ಸುಳ್ಳೇನೋ ಅನ್ನಿಸಿಬಿಡುತ್ತೆ" ಎಂದು ನಸುನಕ್ಕು ಅರೆಕ್ಷಣ ಮಾತು ನಿಲ್ಲಿಸಿದಳು. 'ಯಾವುದ್ರಲ್ಲಾದ್ರೂ ಎಂಗೇಜ್ ಆಗು ಅಂದೆಯಲ್ಲ ವಿನೀ... ಎಲ್ಲಾನೂ ನಾಕು ದಿನ ಹುರುಪು ಅನ್ನಿಸುತ್ತೆ. ಒಂಟಿತನ ಅನ್ನೋದು ಒಣಗಿದ ತರಗೆಲೆಯಾಗಿ ಗಾಳಿಗೆ ಹಾರಿಹೋಯಿತೇನೋ ಅನ್ನಿಸುವಷ್ಟರಲ್ಲಿ, ಯಾವ ಚಿಗುರೆಲೆಗಳೂ ಹೊಸದಾಗಿ ಹುಟ್ಟದೇ ಗಿಡದಲ್ಲಿ ಹಣ್ಣಾದ ಎಲೆಗಳೇ



ತುಂಬಿವೆ ಅನ್ನೋ ವಾಸ್ತವ ಕಣ್ಣೆದುರಿಗೆ ಇರುತ್ತೆ...' ಮೇಗಲೆ ಹುಡುಗ ತಂದಿಟ್ಟ ಮಸಾಲಾ ಟೀ ಗ್ಲಾಸ್ ಕೈಗೆತ್ತಿಕೊಂಡಳು. "ಇಲ್ಲಿ ಇದೊಂದು ಚೆನ್ನಾಗಿರುತ್ತೆ ವಿನೀ... ಶುಂಠಿ, ಲವಂಗ, ಚಕ್ಕೆ ಎಲ್ಲ ಒಂದು ಹದದಲ್ಲಿದೆ... ಯಾವುದೂ ತುಂಬ ಜಾಸ್ತಿಯಾಗಿ ಘಾಟು ಅನ್ನಿಸಲ್ಲ. ಕುಡಿದು ನೋಡು." ಟೀ ಗುಟುಕರಿಸಿದ ವಿನುತಾ, 'ವಾವ್... ಸಖತ್ತಾಗಿದೆ ಕಣೆ, ಹೆಂಗೆ ಮಾಡತಾರೆ ಕೇಳಬೇಕು' ಎಂದಳು. 'ಹೌದೌದು... ನೀನು ಹಿಂಗೆ ಹೋಟೆಲ್ಲುಗಳಲ್ಲಿ ಹೆಂಗೆ ಮಾಡತಾರೆ ಅಂತ ಕೇಳಿಕೊಂಡ ರೆಸಿಪಿಗಳೇ ನೂರಾರು ಇರಬೇಕು...' ಎನ್ನುತ್ತಾ ಮೇಗಲೆ ನಕ್ಕಳು. ಯಾವುದಾದರೂ ಹೋಟೆಲ್ಲಿಗೆ ಹೋದಾಗ, ಅಲ್ಲೇನಾದರೂ ಚೆನ್ನಾಗಿದೆ ಅನ್ನಿಸಿದಾಗ, 'ಹೆಂಗೆ ಮಾಡತಾರೆ ಕೇಳಬೇಕು' ಎನ್ನುವುದು ವಿನುತಾ ತಪ್ಪದೇ ಹೇಳುವ ಮಾತು. ಕೆಲವೊಮ್ಮೆ ಸರ್ವ್ ಮಾಡಲು ಬಂದ ಮಾಣಿಗೋ, ಅಥವಾ ಕೌಂಟರಿನಲ್ಲಿದ್ದವರಿಗೋ ಕೇಳಿಯೂ ಬಿಡುತ್ತಿದ್ದಳು. ಮೇಗಲೆ ಹಾಗೆ ಹೇಳಿ ನಗುತ್ತಿರುವಂತೆ, ವಿನುತಳೂ 'ಹೌದು, ಕೇಳಿಕೊಂಡ ರೆಸಿಪಿಗಳೇನೋ ನೂರಾರು... ಆಮೇಲೆ ಮನೆಗೆ ಹೋಗಿ ಮಾಡಿದ್ದು ಮಾತ್ರ ಸೊನ್ನೆ' ಎನ್ನುತ್ತಾ ನಕ್ಕಳು. ಇಬ್ಬರೂ ಮತ್ತೆ ಮಾತಾಡದೇ ಟೀ ಕುಡಿಯತೊಡಗಿದರು.

'ಸಿದ್ದಾರ್ಥ ಸಿರಿವಂತ ಉದ್ಯಮಿಯಾಗಿದ್ದರಿಂದ ಅವನ ಆತ್ಮಹತ್ಯೆ ನನ್ನನ್ನು ಬಾಧಿಸ್ತಾ ಇದೆ ಅಂತಲ್ಲ ವಿನೀ... ಅಷ್ಟೆಲ್ಲ ಸಿರಿವಂತಿಕೆ ಇದ್ದೂ, ಅವನೇ ಕಟ್ಟಿದ ಉದ್ಯಮವಿದ್ದೂ, ಸೋಲಿನಲ್ಲಿ ಜೊತೆಯಾಗಬಲ್ಲ ಜೀವವೊಂದು ಅವನ ಹೆಗಲೆಣೆಯಾಗಲಿಲ್ಲ... ಎಷ್ಟು